ಸಿ.ಸಿ .ನಂ. 137/2023 ಪಿಡಬ್ಲೂಃ 1

ದಿನಾಂಕಃ 17-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಎಮ್ ಟಿ ಹೆಚ್ ವಕೀಲರಿಂದಃ**

6. ನಾನು ತೆಗೆದುಕೊಳ್ಳಬೇಕೆಂದಿರುವ ಜಾಗಕ್ಕೆ ನಾನು ಹೋಗಿದ್ದೆ . ಆರೋಪಿಯ ಮನೆ ಹತ್ತಿರ ಹೋಗಿದ್ದೆ . 10-15 ವರ್ಷದ ಹಿಂದೆ ಒಬ್ಬನೇ ಹೋಗಿದ್ದೆ . ಅದರ ಸರ್ವೆ ನಂಬರ ಗೊತ್ತಿಲ್ಲ , ಕಾಗದ ಪತ್ರ ಇಲ್ಲ. ಬಾಂಡ್ ಕೊಟ್ಟಿದ್ದರು . ಕಾಗದ ಪತ್ರ ಅವರಿಂದ ಪಡೆದುಕೊಳ್ಳಲಿಲ್ಲ. ಕಾಗದ ಪತ್ರದ ಬಗ್ಗೆ ನನಗೆ ಮಾಹಿತಿ ಇಲ್ಲ. ನನಗೆ ಓದಲು ಬರುವುದಿಲ್ಲ ಕಾರಣ ಬಾಂಡ್ ನ್ನು ಓದಿಲ್ಲ ಅದರಲ್ಲಿ ಏನು ಬರೆದಿದೆ ತಿಳಿದುಕೊಳ್ಳಲಿಲ್ಲ . ರಮಾಕಾಂತ ಆಚಾರಿ ನನ್ನ ಸ್ವಂತ ಅಣ್ಣ . ನನ್ನ ತಮ್ಮ ಹನುಮಂತ ಆಚಾರಿ ನನಗೆ ದುಡ್ಡು ಕೊಟ್ಟಿದ್ದರು . ಎರಡುವರೆ ಲಕ್ಷ ರೂಪಾಯಿ ಕೊಟ್ಟಿದ್ದರು . ಎರಡುವರೆ ಲಕ್ಷ ರೂಪಾಯಿ ಮನೆಯ ಆಸ್ತಿಯ ಬಗ್ಗೆ ದುಡ್ಡು ಕೊಟ್ಟರು . ಅದಕ್ಕೆ ಸಂಬಂಧಪಟ್ಟಂತೆ ಕಾಗದ ಪತ್ರ ಮಾಡಿಕೊಟ್ಟಿಲ್ಲ . ಹನುವಂತರವರು ಕಾಗದ ಪತ್ರ ಮಾಡಿಕೊಂಡಿದ್ದಾರೆ . ಹಣ ತೆಗೆದುಕೊಂಡು ಬಂದ ನಂತರ ಆ ಮನೆಯಲ್ಲಿ ನನಗೆ ಹಕ್ಕು ಇಲ್ಲ . ಈ ಎಲ್ಲಾ ವಿಚಾರವನ್ನು ಮೊದಲಿನ ವಕೀಲರಿಗೆ ಹೇಳಿರುತ್ತೇನೆ. ಬಾಂಡ್ ಆಧಾರದ ಮೇಲೆ ಸಿವಿಲ್ ದಾವೆಯನ್ನು ಮಾಡಲಿಲ್ಲ. ಸಿವಿಲ್ ದಾವೆಯನ್ನು ಮಾಡಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಆಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ . ಹಣವನ್ನು ಕೊಟ್ಟಾಗ ಭದ್ರತೆಗಾಗಿ ಬಾಂಡ್ ನ್ನು ಮಾತ್ರ ಕೊಟ್ಟಿರುತ್ತಾರೆ . ನಂತರ ಚೆಕ್ ನ್ನು ಕೊಟ್ಟರು. ಮೂರೂರು ಕ್ರಾಸ್ ನಲ್ಲಿ ಚೆಕ್ ನ್ನು ಕೊಟ್ಟರು. ಆಗ ನಾನು ಒಬ್ಬನೇ ಇದ್ದೆ. ನನ್ನನ್ನು ಹಾಗೂ ಆರೋಪಿಯನ್ನು ಹೊರತು ಪಡಿಸಿ ವ್ಯವಹಾರದ ಬಗ್ಗೆ ಬೇರೆ ಯಾರಿಗೂ ಗೊತ್ತಿಲ್ಲ. ಯಾವ ಬ್ಯಾಂಕಿನ ಚೆಕ್ ನ್ನು ಕೊಟ್ಟರು ಈಗ ನೆನಪಿಲ್ಲ. ದಿನಾಂಕ ಇಸ್ವಿ ಹೇಳಲು ಬರುವುದಿಲ್ಲ. ಯಾವ ಬ್ಯಾಂಕಿನ ಚೆಕ್ ಮಾಹಿತಿ ಇಲ್ಲ.

7. ಈ ವ್ಯವಹಾರದ ಮೊದಲು ಆರೋಪಿ ನನ್ನ ಬಳಿ ಸಾಕಷ್ಟು ಬಾರಿ ಸಣ್ಣ ಸಣ್ಣ ಮೊತ್ತದ ಹಣವನ್ನು ತೆಗೆದುಕೊಂಡಿದ್ದಾರೆ ಹಾಗೂ ಅದನ್ನು ತೀರಿಸಿದ್ದಾರೆ . ಚೆಕ್ ಬೌನ್ಸ ಆದ ನಂತರ ತಕ್ಷಣ ಅವರಿಗೆ

ತಿಳಿಸಿರುತ್ತೇನೆ. ಚೆಕ್ ನಲ್ಲಿರುವ ಬರವಣಿಗೆ ಆರೋಪಿಯೆ ಬರೆದುಕೊಟ್ಟಿರುತ್ತಾರೆ . ನನ್ನ ಎದುರುಗಡೆ ಬರೆದಿಲ್ಲ. ಈ ಚೆಕ್ ನ್ನು ನಾನು ಇವತ್ತೇ ನೋಡುತ್ತಿದ್ದೇನೆ ಎಂದರೆ ಸರಿ . ನಿಪಿ-6 ಇದೇ ದಿನ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

8. ಆರೋಪಿ ಯಾವುದೇ ಆಸ್ತಿಯನ್ನು ನನಗೆ ಕೊಡುತ್ತೇನೆ ಎಂದು ಹೇಳಿಲ್ಲ ನನ್ನಿಂದ ಯಾವುದೇ ಹಣವನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿ ನನಗೆ ಚೆಕ್ ನ್ನು ಕೊಟ್ಟದ್ದೇ ಇಲ್ಲ ಎಂದರೆ ಸರಿಯಲ್ಲ . ಇದನ್ನು ಹೊರತು ಪಡಿಸಿ ನನ್ನ ಬಳಿ ಇನ್ನೂ ಎರಡು ಚೆಕ್ ಗಳು ಇವೆ . ಒಂದು ಚೆಕ್ ನಲ್ಲಿ 2,60,000/- ರೂ. ಹಾಗೂ ಇನ್ನೊಂದು ಚೆಕ್ ನಲ್ಲಿ 2,50,000/- ರೂ. ಬರೆದದ್ದು ಇದೆ. ಮೊದಲಿನ ವ್ಯವಹಾರದ ಹಣವನ್ನು ಕೊಟ್ಟಿದ್ದರೂ ಸಹಿತ ಭದ್ರತೆಗೋಸ್ಕರ ತೆಗೆದುಕೊಂಡಿರುವ ಚೆಕ್ ನ್ನು ಈಗ ಈ ಕೇಸಿನಲ್ಲಿ ಹಾಜರು ಪಡಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಮೊದಲಿನ ವ್ಯವಹಾರದ ಹಣವನ್ನು ಈಗ ನೀಡಿದ್ದಾರೆ ಹಾಗಾಗಿ ನನಗೆ ಕೊಡುವ ಹಣ ಚುಕ್ತಾ ಆಗಿದೆ ಎಂದರೆ ಸರಿಯಲ್ಲ. ಆರೋಪಿ ನನ್ನ ಬಳಿ ತೆಗೆದುಕೊಂಡಿರುವ ಹಣ ಮರು ಪಾವತಿ ಮಾಡಿರುವುದರಿಂದ ಈ ಪ್ರಕರಣ ನಡೆಯುವುದಿಲ್ಲ ಎಂದರೆ ಸರಿಯಲ್ಲ . ಸುಳ್ಳು ಕಾಗದ ಪತ್ರ ಹಾಜರು ಪಡಿಸಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ . ಈ ಪ್ರಕರಣಕ್ಕೂ ನಾನು ಹಾಜರು ಪಡಿಸಿದ ದಾಖಲಾತಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ . ನಾನು ಅವರನ್ನು ಸತಾಯಿಸಿ ಪ್ರಕರಣವನ್ನು ದಾಖಲು ಮಾಡಿದ್ದರಿಂದ ನಾನೇ ಅವರಿಗೆ ಪರಿಹಾರವನ್ನು ಕೊಡಬೇಕು ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.